ಮಾತನಾಡಲು ಅಳುಕೇ?' ಆಶಾ ಮುಗುಳ್ನಗುತ್ತಾ ಕೇಳಿದಳು.

ಸಂಜಯ್ ತಲೆಯೆತ್ತಿ ಆಶಾಳನ್ನು ನೋಡಿದ. ಅಬ್ಬಾ ಈ ಹುಡುಗಿಯೇ! ನೋಡಲು ಒಳ್ಳೆ ಗೊಂಬೆಯ ತರಹ ಇದ್ದರೂ ಧೈರ್ಯದಲ್ಲಿ ಯಾರಿಗೂ ಬಿಟ್ಟಿಲ್ಲ ಈಕೆ ಅಂದುಕೊಂಡ.

'ಆಶಾ, ನಿನಗೆ ಹೇಗೆ ಹೇಳಲಿ ಹೇಳು? ಈ ಲ್ಯಾಪ್‌ಟಾಪ್ ನನಗೆ ಸರ್ವಸ್ವ. ಈ ಲ್ಯಾಪ್‌ಟಾಪ್ ಮುಖಾಂತರ ನನಗೆ ನಿನ್ನಂತಹ ಸಾವಿರಾರು ಹುಡುಗಿಯರ ಜೊತೆ ಒಮ್ಮೆಗೇ ಮಾತನಾಡಲಿಕ್ಕೆ ಆಗುತ್ತದೆ. ಹಾಗಿರುವಾಗ ನಿನ್ನ ಒಬ್ಬಳ ಹತ್ರ ಯಾಕೆ ಮಾತನಾಡಬೇಕು ಹೇಳು?' ಅನ್ನುತ್ತಾ ಸಂಜಯ್ ಆಶಾಳ ಪ್ರಶ್ನೆಗೆ ಪ್ರತಿ ಪ್ರಶ್ನೆ ಹಾಕಿದ್ದ.

'ಹೌದು, ನಿಮ್ಮ ಮುಖ ನೋಡಿದರೆ ನೀವು ಸಾವಿರಾರು ಹುಡುಗಿಯರ ಹತ್ತಿರ ಮಾತನಾಡುವ ತರಹ ಕಾಣ್ತೀರಿ. ಇನ್ನು ಸಂಜಯ್ ಅಂತ ಇರುವ ಹೆಸರು ತೆಗೆದು ಕೃಷ್ಣ ಅಂತ ಇಟ್ಟುಕೊಳ್ಳುವುದು ಬಾಕಿ' ಅನ್ನುತ್ತಾ ಆಶಾ ನಕ್ಕಳು.

ಎಲಾ ಈ ಹುಡುಗಿಯೇ! ನನ್ನನ್ನು ನೋಡಿ ನನ್ನ ಇಡೀ ವ್ಯಕ್ತಿತ್ವವನ್ನೇ ಅಳೆದುಬಿಡುತ್ತಿದ್ದಾಳೆ ಅಂದುಕೊಂಡ ಸಂಜಯ್. ಹುಡುಗಿಯರೇ ಹಾಗೆ, ಹುಟ್ಟುವಾಗಲೇ ಅವರಿಗೆ ಆರನೇ ಇಂದ್ರಿಯ ದೇವರು ಕೊಟ್ಟಿರುತ್ತಾನೆ ಅಂದುಕೊಂಡ.

ಆ ವೇಳೆಗೆ ಅಲ್ಲಿಗೆ ಮಾದ ಬಂದ. ಅವನನ್ನು ನೋಡಿದ ಸಂಜಯನಿಗೆ ಆಗ ಸಂಜೆಯಾದದ್ದು ಅರಿವಿಗೆ ಬಂತು.

ಸಂಜಯ್ ಸೂರ್ಯಾಸ್ತಮಾನದ ಸಮಯ ಮಾದನನ್ನು ಕರಕೊಂಡು ದೊಡ್ಡ ಗುಡ್ಡಕ್ಕೆ ಹೋಗಿ ಹಲವಾರು ಫೋನುಗಳನ್ನು ಮಾಡಿದ. ಲ್ಯಾಪ್‌ಟಾಪ್‌ನಲ್ಲಿ ಸ್ವಲ್ಪ ಸಮಯ ಕೆಲಸ ಮಾಡಿದ. ಸೂರ್ಯಾಸ್ತಮಾನದ ವೇಳೆಗೆ ಇಬ್ಬರೂ ಶಾಸ್ತ್ರಿಗಳ ಮನೆಗೆ ಹಿಂತಿರುಗಿದರು.

ಇತ್ತ ಶಾಸ್ತ್ರಿಗಳ ಮನೆಯಿಂದ ಹೊರಟ ಆನಂದಣ್ಣ ಬೇಗಬೇಗನೇ ಮದ್ದನ್ನು ತನ್ನ ಮನೆಯಲ್ಲಿ ಕೊಟ್ಟು ನೇರವಾಗಿ ಜಯ ಶೆಟ್ಟರ ಮನೆಗೆ ಹೋದರು. ಜಯ ಶೆಟ್ಟರಲ್ಲಿ ಶಾಸ್ತ್ರಿಗಳ ಮನೆಯಲ್ಲಿ ಸಂಜಯ್ ಬಂದಿರುವುದನ್ನೂ ವಿವರಿಸಿದರು. ಶೆಟ್ಟರಿಗೆ ಈ ವಿಷಯ ಮೊದಲು ಯಾರೋ ಹೇಳಿದ್ದರು. ಆದರೆ ಆನಂದಣ್ಣ ಹೇಳಿದ ಮೇಲೆ ವಿಷಯ ಖಾತ್ರಿಯಾಯಿತು. ಶೆಟ್ಟರು ಕಾರಂತರ ಜಾಗದಲ್ಲಿ ತೋಟಹಾಕಿ ಈಗಾಗಲೇ ಹತ್ತು ವರ್ಷ ಮೀರಿತ್ತು. ಇದಕ್ಕೆ ಅವರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಈಗ ಅವರು ಒಳ್ಳೆ ಅಡಿಕೆ ಇಳುವರಿ ತೆಗೆಯುತ್ತಿದ್ದರು. ಆ ಮಾತು ಕೇಳಿದವರೇ 'ಈಗ ಈ ಸಂಜಯ್ ಯಾಕೆ ಬಂದ?' ಎಂದು ಲೆಕ್ಕ ಹಾಕುತ್ತಾ ತಲೆಕೆರೆಯುತ್ತಾ ಮೌನವಾದರು.

ಆಮೇಲೆ ಸ್ವಲ್ಪ ಹೊತ್ತು ಬಿಟ್ಟು, ಗಂಭೀರವಾಗಿ ತನ್ನ ಇದಿರಿದ್ದ ಆನಂದಣ್ಣನಲ್ಲಿ 'ಅಲ್ಲ ಆನಂದಣ್ಣ, ನಿಮಗೆ ಗೊತ್ತಿದೆ ತೋಟ ಮಾಡುವುದು ಎಷ್ಟು ಕಷ್ಟ ಅಂತ. ಈ ಸಂಜಯ್ ಯಾಕೆ ಬಂದ ಗೊತ್ತಾಗ್ತಿಲ್ಲ, ಒಂದು ವೇಳೆ ತನ್ನ ಆಸ್ತಿಯನ್ನು ವಶಕ್ಕೆ ತೆಗೆದುಕೊಂಡರೆ ನಾವು ಏನು ಮಾಡುವುದು?' ಶೆಟ್ಟರು ಹೇಳಿದರು.

ಆನಂದಣ್ಣ ಶೆಟ್ಟರಾಚೆ ತಿರುಗಿ 'ಶೆಟ್ರೇ, ನೀವು ಹೆಚ್ಚು ತಲೆಬಿಸಿ ಮಾಡಬೇಡಿ. ನಾನೂ ಕಾರಂತರ ಜಾಗದ ಗದ್ದೆ ಉಳುಮೆ ಮಾಡಿಕೊಂಡಿದ್ದೇನೆ ಅಲ್ಲವೇ? ಇದರಲ್ಲಿ ನಾವಿಬ್ಬರೂ ಜೊತೆಯಲ್ಲಿದ್ದೇವೆ' ಅಂದರು.

ಶೆಟ್ಟರಿಗೆ ಇದು ಸ್ವಲ್ಪ ನೆಮ್ಮದಿ ಕೊಟ್ಟಿತು. 'ಹೌದು, ಆನಂದಣ್ಣ, ಆದರೂ ನಮಗಿಬ್ಬರಿಗೂ ಇದೊಂದು ಸಮಸ್ಯೆಯೇ, ನೀವು ನಾಲ್ಕೂರು ನೋಡಿದವರು. ಏನು ಮಾಡೋಣ ಈಗ?' ಅಂದರು.

ಇಬ್ಬರೂ ಆಲೋಚನೆ ಮಾಡಲು ಶುರು ಮಾಡಿದರು.

ಸ್ವಲ್ಪಹೊತ್ತಿಗೆ ಪುನಃ ಶೆಟ್ಟರು 'ಅಂದಹಾಗೆ ಈ ಸಂಜಯ್ ಕಾರಂತರ ಮೊಮ್ಮಗ ಹೌದು ತಾನೇ?' ಅಂದರು.

ಆನಂದಣ್ಣನಿಗೆ ಈ ಪ್ರಶ್ನೆ ಬಹಳ ಮುಖ್ಯ ಪ್ರಶ್ನೆಯಾಗಿ ಕಂಡಿತು. 'ಹೌದು, ಶೆಟ್ರೇ, ನಿಮ್ಮ ಪ್ರಶ್ನೆ ಬಹಳ ಮುಖ್ಯವಾದದ್ದು. ನಾವು ಶಾಸ್ತ್ರಿಗಳನ್ನು ಈ ವಿಷಯದಲ್ಲಿ ನಂಬಲಿಕ್ಕೆ ಆಗುವುದಿಲ್ಲ – ಅವರು ಬಹಳ ಮುಗ್ಧ. ಈ ಹುಡುಗ ಕಾರಂತರ ಮೊಮ್ಮಗ ಹೌದೋ ಅಲ್ಲವೋ ಅಂತ ಮೊದಲಿಗೆ ಪರೀಕ್ಷೆ ಮಾಡಬೇಕು. ಒಂದು ವೇಳೆ ಕಾರಂತರ ಮೊಮ್ಮಗ ಆಗಿದ್ದಲ್ಲಿ ಇಲ್ಲಿ ಬಂದ ಉದ್ದೇಶ, ಅವನ ಆಲೋಚನೆ ಏನಿದೆ ಇತ್ಯಾದಿ ವಿಷಯವನ್ನು ನಾವು ತಿಳ್ಕೊಳ್ಬೇಕು' ಅಂದರು.

ಶೆಟ್ರಿಗೆ ಇದು ಸರಿ ಕಂಡಿತು. ಆನಂದಣ್ಣನ ಕಡೆ ತಿರುಗಿ 'ಆನಂದಣ್ಣ, ಈ ಕೆಲಸಕ್ಕೆ ನಿಮ್ಮಿಂದ ಉತ್ತಮವಾದವರು ಬೇರಾರೂ ಇಲ್ಲ. ನೀವೇ ಒಂದು ಪರೀಕ್ಷೆ ಮಾಡಿ' ಅಂದರು.

ಆನಂದಣ್ಣನಿಗೆ ಇದೊಂದು ಕಷ್ಟದ ಕೆಲಸವಾಗಿ ಕಂಡಿತು. ಈ ಹುಡುಗ ಕಾರಂತರ ಮೊಮ್ಮಗ ಹೌದೋ ಅಲ್ಲವೋ ಅಂತ ಹೇಗೆ ಕಂಡುಹಿಡಿಯುವುದು? ಆಲೋಚನೆ ಮಾಡಲು ಶುರು ಮಾಡಿದರು.

ಶೆಟ್ಟರು ಹೇಳಿದರು, 'ಆನಂದಣ್ಣ, ನನಗೊಂದು ಉಪಾಯ ಹೊಳೆಯುತ್ತಿದೆ. ಈ ರಾಮಾಯಣದಲ್ಲಿ ಹನುಮಂತ ರಾಮನ ಬಂಟ ಹೌದೋ ಅಲ್ಲವೋ ಅಂತ ಕಂಡುಹಿಡಿಯಲು ಸೀತೆ ಹನುಮಂತನಲ್ಲಿ ಕುರುಹು ಕೇಳಿದ್ದಳಂತೆ. ಹಾಗೆಯೇ ನಾವೂ ಏನಾದರೂ ಕುರುಹು ಕೇಳಿದರೆ ಆಗದೇ?' ಅಂದರು.

ಆನಂದಣ್ಣನಿಗೆ ಇದು ಸರಿ ಕಂಡಿತು. ಆದರೂ ರಾಮಾಯಣದಂತೆ ಈ ಹುಡುಗನಲ್ಲಿ ಅವನ ಹಿರಿಯರ ಉಂಗುರ ಅಥವಾ ಚೈನ್ ಇರುವ ಸಾಧ್ಯತೆ ಕಡಿಮೆ. ಇದ್ದರೂ ಅದು ಕಾರಂತರದ್ದು ಹೌದೋ ಅಲ್ಲವೋ ಹೇಳುವಷ್ಟು ಆನಂದಣ್ಣನಿಗೂ ಗೊತ್ತಿರಲಿಲ್ಲ. ಆದರೂ ಈ ಹುಡುಗನಲ್ಲಿ ಕಾರಂತರ ಆಸ್ತಿಯ ವಿವರ ಕೇಳುವ ಅನ್ನಿಸಿತು. 'ಶೆಟ್ರೇ, ನಾನು ಒಂದು ಉಪಾಯ ಮಾಡ್ತೇನೆ ನೋಡಿ, ಈ ಹುಡುಗನನ್ನು ನಾಳೆ ಮತ್ತೆ ಭೇಟಿಯಾಗುತ್ತೇನೆ. ಅವನಲ್ಲಿ ದಾರಿಯಲ್ಲಿ ಅವನಿಗೆ ತನ್ನ ಹಿರಿಯರ ಆಸ್ತಿ ಮತ್ತು ಮನೆತನದ ಬಗ್ಗೆ ಎಷ್ಟು ಗೊತ್ತಿದೆ ಅಂತ ಪ್ರಶ್ನೆಯ ಮುಖಾಂತರ ತಿಳ್ಕೊಳ್ತೇನೆ. ಇದರಲ್ಲಿ ಎರಡು ಉಪಯೋಗ ಇದೆ. ಹುಡುಗ ಕಾರಂತರ ಮೊಮ್ಮಗ ಹೌದೋ ಅಲ್ಲವೋ ಗೊತ್ತಾಗ್ತದೆ. ಹಾಗೇ ನಮ್ಮ ಜಾಗಗಳ ಬಗ್ಗೆ ಅವನಿಗೆ ಗೊತ್ತಿದೆಯೋ ಅಂತ ಗೊತ್ತಾಗ್ತದೆ' ಅಂದರು.

ಶೆಟ್ಟರಿಗೆ ಖುಷಿಯಾಯ್ತು. 'ಆನಂದಣ್ಣ, ಇದಕ್ಕೇ ನಿಮ್ಮನ್ನು ಊರವರೆಲ್ಲ 'ಅಣ್ಣ' ಅಂತ ಕರೆಯುವುದು. ಎಂಥ ಸಮಸ್ಯೆಗೂ ನಿಮ್ಮಲ್ಲಿ ಪರಿಹಾರ ಇರ್ತದೆ' ಎಂದು ಶಿಫಾರಸ್ಸು ಮಾಡಿದರು.

ಆನಂದಣ್ಣ ಶೆಟ್ಟರ ಮನೆಯಿಂದ ತನ್ನ ಮನೆಯ ಕಡೆ ನಡೆದರು.

ಮರುದಿನ ಸಂಜಯ್ ಬೇಗನೆ ಎದ್ದು ಶಾಸ್ತ್ರಿಗಳ ಜೊತೆ ವಾಕಿಂಗಿಗೆ ಹೋದ. ಶಾಸ್ತ್ರಿಗಳು ಎಂದಿನಂತೆ ಅವರಷ್ಟಕ್ಕೆ ಮಾತಾಡಿಕೊಳ್ಳುತ್ತಿದ್ದರು. ಶಾಸ್ತ್ರಿಗಳ ಮುಂದೆ ಅವರ ನಾಯಿಯೂ ಅದರ ಹಿಂದೆ ಸಂಜಯನೂ ಹೊರಟ. ವಾಕಿಂಗ್ ಮುಗಿಸಿ ಮನೆಗೆ ಹಿಂತಿರುಗಿದಾಗ ಶಾಸ್ತ್ರಿಗಳ ಮನೆಯಲ್ಲಿ ಆನಂದಣ್ಣ ಬಂದಿದ್ದರು.

'ಶಾಸ್ತ್ರಿಗಳೇ, ನಿನ್ನೆ ಬರ್ಲಿಕ್ಕಾಗಲಿಲ್ಲ, ಹೆಂಡ್ತಿಗೆ ಸೌಖ್ಯ ಇರಲಿಲ್ಲ ನೋಡಿ' ಅಂದರು.

ಅದಕ್ಕೆ ಶಾಸ್ತ್ರಿಗಳು 'ಹೇಗಿದ್ದಾರೆ ಇವತ್ತು?' ಅಂತ ಪ್ರಶ್ನಿಸಿದರು.

'ಶಾಸ್ತ್ರಿಗಳೇ, ನೀವು ಮದ್ದು ಕೊಟ್ಟ ಮೇಲೆ ಬೇರೆ ಪ್ರಶ್ನೆ ಉಂಟೇ? ಇವತ್ತು ಬಹಳ ಸುಧಾರಿಸಿದ್ದಾಳೆ' ಅಂದರು.

ಶಾಸ್ತ್ರಿಗಳು 'ಬಹಳ ಸಂತೋಷ, ನಾನು ಸ್ನಾನ ಮಾಡಿ ಪೂಜೆ ಮಾಡ್ತೇನೆ, ನಂತರ ಸ್ವಲ್ಪ ಉಪಾಹಾರ ಮಾಡಿಕೊಂಡು ಸಂಜಯನನ್ನು ಕರಕೊಂಡು ಹೋಗಿ' ಅಂದರು.

ಸಂಜಯ್ ಬೇಗನೆ ಸ್ನಾನ ಮಾಡಿ ಮದ್ದು ಹಚ್ಚಿಕೊಂಡು ಆನಂದಣ್ಣನೊಂದಿಗೆ ಕೂತು ಇಡ್ಲಿ ತಿಂದು ಹೊರಟುನಿಂತ.

'ಬನ್ನಿ ಹೋಗುವ' ಅಂತ ಆನಂದಣ್ಣ ಸಂಜಯನನ್ನು ಕರೆದುಕೊಂಡು ಹೊರಟರು.

ಆನಂದಣ್ಣ ದಾರಿಯಲ್ಲಿ ಸಂಜಯನನ್ನು ನೇರ ರಸ್ತೆಯಲ್ಲಿ ಕರೆದುಕೊಂಡು ಹೋಗದೆ ಸಣ್ಣ ಗುಡ್ಡ ದಿಣ್ಣೆ ದಾಟಿ ಕಾಡಿನ ಮುಖಾಂತರ ಕರೆದುಕೊಂಡು ಹೊರಟರು.

ಸ್ವಲ್ಪ ದೂರ ಹೋದ ಸಂಜಯ್, 'ಆನಂದಣ್ಣ, ನನ್ನಪ್ಪ ನಮ್ಮ ಮನೆಗೆ ಶಾಸ್ತ್ರಿಗಳ ಮನೆಯಿಂದ ನೇರ ಕಾಲುದಾರಿ ಇದೆ ಅನ್ನುತ್ತಿದ್ದರು, ಈಗ ಆ ಕಾಲುದಾರಿ ಇಲ್ಲವೇ?' ಅಂತ ಪ್ರಶ್ನಿಸಿದ.

ಬೇಗ ಬೇಗ ನಡೆಯುತ್ತಿದ್ದ ಆನಂದಣ್ಣ ಒಂದುಕ್ಷಣ ನಿಂತು ಸಂಜಯನ ಮುಖ ನೋಡಿದರು. ಅವರಿಗೆ ಆಶ್ಚರ್ಯ ಮತ್ತು ಬೇಸರ ಎರಡೂ ಒಟ್ಟಿಗೇ ಆಗಿತ್ತು. ಈ ಹುಡುಗ ಕಾರಂತರ ಮೊಮ್ಮಗ ಅಲ್ಲ ಅಂತ ತೀರ್ಮಾನ ಮಾಡುವ ತವಕದಲ್ಲಿದ್ದ ಆನಂದಣ್ಣನಿಗೆ ಸಂಜಯನ ಈ ಪ್ರಶ್ನೆ ಗಾಬರಿ ತಂದಿತ್ತು. 'ಎಲಾ, ಈ ಹುಡುಗ... ಹುಟ್ಟಿ ಬೆಳೆದದ್ದು ಅಮೆರಿಕದಲ್ಲಿ. ಆದರೆ ಇವನಿಗೆ ನಮ್ಮೂರ ಕಾಲುದಾರಿಯೂ ಗೊತ್ತಿರುವ ಹಾಗೆ ಇದೆ' ಅಂದುಕೊಂಡರು.

'ನೋಡಿ, ಆ ಕಾಲುದಾರಿ ಈಗಲೂ ಇದೆ. ನಾನು